**Government of Karnataka**
**Deposition Sheet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್‌ಪ್ರಕರಣ ಸಂಖ್ಯೆ | 203/2017 |

ದಿನಾಂಕ 24-05-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ಶಿವಪ್ಪ |
| ತಂದೆಯ ಹೆಸರು | ಲಚಮಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೋಣಚಪ್ಪಳಿ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

೧ ಮತ್ತು ೨ ನೇ ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾ–2 ರಿಂದ ೯ ರವರ ಪರಿಚಯ ನನಗೆ ಇರುತ್ತದೆ. ಕಳೆದ ೯ ವರ್ಷಗಳ ಹಿಂದೆ ನನ್ನ ಮಗನಾದ ಶರಣಬಸಪ್ಪ ಈತನು ರವಿವಾರದಂದು ಜಮೀನಿನಲ್ಲಿ ಮೇವನ್ನು ತರಲು ಹೋಗಿದ್ದನು ರಾತ್ರಿಯಿಡಿ ಮಳೆಯಾಗಿತ್ತು, ಅಮರೇಗೌಡರವರ ಗದ್ದೆಯಲ್ಲಿ ದನಕರಗಳು ಬರದಂತೆ ನೋಡಿಕೊಳ್ಳಲು ಸೋಲಾರ್ ಅಳವಡಿಸಿದ್ದರು ಅದರ ಮೇಲೆ ಕೆ.ಇ.ಬಿ. ಯ ಕಂಬ ಬಾಗಿತ್ತು ಆ ಕಾರಣ ಸದರಿ ಕಂಬದ ವಿದ್ಯುತ್ ತಂತಿಯು ಸೋಲಾರ್ ವೈರಿನ ಮೇಲೆ ಬಿದ್ದಿತ್ತು. ನನ್ನ ಮಗನು ಸೋಲಾರ್ ವೈರನ್ನು ಬಗ್ಗಿ ಬರುವಾಗ ವಿದ್ಯುತ್ ಸ್ಪರ್ಷವಾಗಿ ನನ್ನ ಮಗನು ಮೃತಪಟ್ಟಿರುತ್ತಾನೆ. ನನ್ನ ಅಳಿಯನಾದ ನಿಂಗಪ್ಪನು ಈ ವಿಷಯವನ್ನು ನನಗೆ ತಿಳಿಸಿದ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ನಾನು ದೂರನ್ನು ಕೊಟ್ಟಿರುತ್ತೇನೆ. ಅದೇ ರೀತಿ ನಾನು ಪುರವಣಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ–೧ ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ–೧(ಎ) ಎಂದು ಗುರುತಿಸಲಾಯಿತು.

ಮುದ್ದೆಮಾಲುಗಳನ್ನು ಹಾಜರುಪಡಿಸಲು ಸ.ಸ.ಅ ರವರು ಸಮಯ ಕೋರಿರುತ್ತಾರೆ ಆದ್ದರಿಂದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/–**

ಜೆ.ಎಂ.ಎಫ್.ಸಿ., ದೇವದುರ್ಗ